

ಹತ್ತೊಂಬತ್ತು ವರ್ಷದಿಂದ ಅದೇ ಜಾಗದಲ್ಲಿ ಗೂಡು ಕಟ್ಟುತ್ತಿವೆ. ನಡುವೆ ಎರಡು- ಮೂರು ವರ್ಷಗಳು ಬಿಟ್ಟರೆ ಅವು ಪ್ರತಿ ಸಲವೂ ತಪ್ಪದೇ ಮರಿ ಹಾಕಿವೆ. ನಾನು ಇಲ್ಲಿಯ ತನಕ ಇವುಗಳ ಬದುಕನ್ನು ನೋಡುತ್ತಾ, ಹಾಗೆಯೇ ಚಿತ್ರಿಸುತ್ತಾ ಬಂದಿದ್ದೇನೆ' ಎನ್ನುತ್ತಾ ಕಾಳಿ ನದಿಯ ಕಾಡಿನ ನಡುವೆ ಇದ್ದ ಮಂಗಟ್ಟೆಗಳ ಪೊಟರೆ ಮನೆಯನ್ನು ಉಮೇಶ್ ನನಗೆ ತೋರಿಸಿದರು.

ಮಂಗಟ್ಟೆಗಳ ಸಂತಾನೋತ್ಪತ್ತಿಯ ಕಥೆ ಮೂರು ತಿಂಗಳ ಅವಧಿಯಲ್ಲಿ ನಡೆಯುತ್ತದೆ. ಇವುಗಳ ಪ್ರತಿ ಚಟುವಟಿಕೆಗಳನ್ನು ಕೂತು ಗಮನಿಸುವುದು; ಹಾಗೆಯೇ ಚಿತ್ರಿಸುವುದು ಅಷ್ಟು ಸಲೀಸಾದ ಕೆಲಸವಲ್ಲ. ಎತ್ತರದ ಮರದ ಮೇಲಿರುವ ಇವುಗಳ ಎಲ್ಲಾ ಕಾರ್ಯವೈಖರಿಗಳನ್ನೂ ಸಣ್ಣಶಬ್ದವೂ ಮಾಡದಂತಿದ್ದು ಗಮನಿಸಬೇಕು. ಪೊಟರೆ ಕಾಣುವಂತೆ ದೂರದ ಮರದಲ್ಲಿ ಮಚಾನ್ ಯಾನೆ ಮರದಟ್ಟಿಗೆ ರಚಿಸಿಕೊಳ್ಳಬೇಕು. ದಿನವಿಡೀ ಈ ಇಕ್ಕಟ್ಟು ಜಾಗದಲ್ಲಿ ಕೆಮ್ಮದೆ, ಕ್ಯಾಕರಿಸದೆ, ಕೊನೆಗೆ ಉಚ್ಚೆಯನ್ನೂ ಹೊಯ್ಯದೆ ಪಟಗಾರ ಕೂತಿರಬೇಕು. ತನ್ನ ಸುತ್ತಮುತ್ತ ಅನ್ಯರು ಇದ್ದಾರೆಂಬ ಸಣ್ಣ ಸುಳಿವೂ ಈ ಪಕ್ಷಿಗಳಿಗೆ ಗೊತ್ತಾಗದಂತೆ ಎಚ್ಚರಿಕೆ ವಹಿಸಬೇಕು. ಒಂದು ಸಣ್ಣ ಶಬ್ದವನ್ನು ಸೂಕ್ಷ್ಮವಾಗಿ ಗ್ರಹಿಸುವ, ಮನುಷ್ಯರ ದೇಹದ ತ್ಯಾಜ್ಯಗಳ ವಾಸನೆಯನ್ನೂ ಗಕ್ಕನೆ ಕಂಡು ಹಿಡಿಯುವ ಶಕ್ತಿ ಇವಕ್ಕಿವೆ. ತಮ್ಮ ತೀಕ್ಷ್ಣ ಕಣ್ಣುಗಳಿಂದ ಎಲ್ಲವನ್ನೂ ಗಮನಿಸಿ, ಗ್ರಹಿಸುವ ಪರಿಣಿತ ಹಕ್ಕಿಯಿದು.

ಇನ್ನು ಮಂಗಟ್ಟೆ ಹಕ್ಕಿಗಳಿಗೆ ಕಾಸರಕ ಕಾಯಿ ಎಂದರೆ ತುಂಬಾ ಇಷ್ಟ. ಇದರ ಸಿಪ್ಪೆ ತೆಗೆದು ಬಿಸಾಕಿ, ಒಳಗಿನ ತಿರುಳನ್ನು ಬಲು ಖುಷಿಯಿಂದ ತಿನ್ನುತ್ತವೆ. ಅಸಲಿಗೆ ಈ ಕಾಯಿ ತುಂಬಾ ವಿಷಕಾರಿ. ಬೇರೆ ಪ್ರಾಣಿಗಳಾಗಲಿ, ಮನುಷ್ಯರಾಗಲೀ ತಿಂದರೆ ಸತ್ತೇ ಹೋಗುತ್ತೇವೆ. ಆದರೆ ಇಂತಹ ವಿಷಭರಿತ ಕಾಯನ್ನು ಈ ಹಕ್ಕಿ ಏತಕ್ಕಾಗಿ ತಿನ್ನುತ್ತದೆಯೋ ಗೊತ್ತಿಲ್ಲ. ಯಾವ ಉಪಯೋಗ ಇದರ ಸೇವನೆಯಿಂದ ಆಗುವುದೋ? ಅದೂ ಕೂಡ ತಿಳಿದುಕೊಳ್ಳಬೇಕಾದ ವಿಷಯ. ಕಾರಣವಿಲ್ಲದೆ ಯಾವ ಪಕ್ಷಿಗಳು ಅನಗತ್ಯವಾದದ್ದನ್ನು ಸೇವಿಸುವುದಿಲ್ಲ. ಈ ಪ್ರಕೃತಿಯಲ್ಲಿ ತಾವು ತಿನ್ನುವ ಆಹಾರದ ವಿಷಯದಲ್ಲಿ ಅವುಗಳಿಗೆ ಸಂಪೂರ್ಣ ಮಾಹಿತಿ ಇದ್ದೇ ಇರುತ್ತದೆ. ಅಚ್ಚರಿ ಎಂದರೆ ಕಾಸರಕದ ವಿಷದ ತಿರುಳನ್ನು ತಿಂದ ಮಂಗಟ್ಟೆ ತಕ್ಷಣವೇ ಹೋಗಿ ಮಣ್ಣು ತಿನ್ನುತ್ತದೆ. ಪ್ರಾಯಶಃ ಅದರ ವಿಷವನ್ನು ಮಣ್ಣು ತಿಳಿಗೊಳಿಸಬಹುದೇನೋ? ಏನೋ ಗೊತ್ತಿಲ್ಲ. ಎಲ್ಲವನ್ನೂ ಬಲ್ಲ ಭೂ ತಾಯಿಯೇ ಈ ನಿಗೂಢ ಪ್ರಶ್ನೆಗಳಿಗೆ ಉತ್ತರ ಕೊಡಬೇಕು.

●